ಅನುಬಂಧ

ಹಾಸನ-ಬೇಲೂರು ರಸ್ತೆ ಬದಿ ಮರಗಳ ವರ್ಗವಾರು ಪಟ್ಟಿ

1.	ಆಲ	238
2.	ನೇರಳೆ	96
3.	ಗೋಣಿ	167
4.	ಬಸರಿ	05
5.	ಮಾವು	206
6.	ಅತ್ತಿ	94
7.	ಕರಿಜಾಲಿ	07
8.	ಹಲಸು	03
9.	ಹುಣಸೆ	04
10.	ಸೀಮೆತಂಗಡಿ	01
11.	ಅರಳಿ	09
12.	ಬಾಗ	01
13.	ಗೋಲ್‌ಮೋಹರ್	01
14.	ರೈನ್‌ಟ್ರಿ	01
	ಒಟ್ಟು	833

ಜಮೀನು ನಕ್ಷೆಗೆ ಲೈಸೆನ್ಸ್ ಸರ್ವೆಯರ್ ಸಹಿ ಪದ್ಧತಿ

1802 (1361) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮೀನು ನಕ್ಷೆಗೆ ಲೈಸೆನ್ಸ್ ಸರ್ವೆಯರ್ ಸಹಿ ಕಡ್ಡಾಯ ಪದ್ಧತಿಯನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಕಾರಣಕ್ಕೆ ರದ್ದುಗೊಳಿಸಲಾಗಿದೆ ತಿಳಿಸುವುದು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಲೈಸೆನ್ಸ್ ಸರ್ವೆಯರ್ ಯೋಜನೆಯ ಪದ್ಧತಿಯನ್ನು ಸರ್ಕಾರ ರದ್ದುಗೊಳಿಸಿರುವುದಿಲ್ಲ. ಯೋಜನೆಯು ಅಗತ್ಯ ಕಾನೂನು ತಿದ್ದುಪಡಿಗಳೊಂದಿಗೆ ಜಾರಿಯಲ್ಲಿರುವಾಗ ಸಾರ್ವಜನಿಕರ ರಿಟ್ ಅರ್ಜಿ ಮೇರೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ಸರ್ಕಾರದ ಅಧಿಸೂಚನೆ ಸಂ. ಆರ್‌ಡಿ 185 ಮುನೋಮು 2001, ದಿನಾಂಕ 20.8.2002ಕ್ಕೆ ಮಾತ್ರ ತಡೆಯಾಜ್ಞೆ ನೀಡಿರುತ್ತದೆ. ಉಚ್ಚ ನ್ಯಾಯಾಲಯದಲ್ಲಿನ ಈ ಪ್ರಕರಣ ಇತ್ಯರ್ಥವಾದ ನಂತರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಹಾಸನ ಜಿಲ್ಲೆಯ ಬಾಲ ಕಾರ್ಮಿಕರು

1803 (1362) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಬಾಲ ಕಾರ್ಮಿಕರು ಎಷ್ಟು; ತಾಲ್ಲೂಕುವಾರು ವಿವರ ನೀಡುವುದು.